ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 47 |
| ಮಾನ್ಯ ಸದಸ್ಯರ ಹೆಸರು | : | **ಶ್ರೀ ಅ. ದೇವೆಗೌಡ (ಪದವೀಧರರ ಕ್ಷೇತ್ರ)** |
| ಉತ್ತರಿಸಬೇಕಾದ ದಿನಾಂಕ | : | **12.09.2022** |
| ಉತ್ತರಿಸಬೇಕಾದ ಸಚಿವರು | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು** |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸರ್ಕಾರವು ದಿನಾಂಕ:20.07.2022ರಂದು NHK/RBSKರಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರ ವೇತನವನ್ನು ರೂ.48,000/-ಗಳಿಗೆ ಹೆಚ್ಚಿಸಲು ಉದ್ದೇಶಿಸಿರುವುದು ನಿಜವೇ; ನಿಜವಾಗಿದ್ದಲ್ಲಿ, ಇದು ಕಾರ್ಯಗತವಾಗಿದೆಯೇ; ಆಗದಿದ್ದಲ್ಲಿ, ಕಾರಣವೇನು; (ಮಾಹಿತಿ ಒದಗಿಸುವುದು) | ಈ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಆ) | NHK/RBSK ರಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೂ, ಅಲೋಪತಿ ವೈದ್ಯರಿಗೂ ಒಂದೇ ಕೆಲಸ ಆದರೂ ವೇತನದಲ್ಲಿ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾರ್ಮಿಕ ನ್ಯಾಯಾಲಯದ ಆದೇಶಾನುಸಾರ ಸಮಾನ ಕೆಲಸಕ್ಕೆ ಸಮಾನ ವೇತನ ಅನ್ವಯವಾಗುವುದಿಲ್ಲವೆ: ಸಮಾನ ವೇತನ ಪಡೆಯಲು ಆಯುಷ್ ವೈದ್ಯರು ಅರ್ಹರಿಲ್ಲವೆ; (ಮಾಹಿತಿ ಒದಗಿಸುವುದು) | -ಬಂದಿದೆ-<br>ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ (NHM) ಪ್ರತೀ ವರ್ಷದ ಆರ್.ಓ.ಪಿ ಯ ಅನುಮೋದನೆಯಾಗಿರುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರ್ .ಬಿ.ಎಸ್.ಕೆ ಕಾರ್ಯಕ್ರಮದಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರಿಗೆ (BAMS & MBBS) ವೇತವನ್ನು ನೀಡಲಾಗುತ್ತಿದೆ. |
| ಇ) | ಖಾಸಗಿ ವಲಯದಲ್ಲಿ ಕೆಲಸ ಮಾಡುವ ಆಯುಷ್ ವೈದ್ಯರಿಗೆ ಸರ್ಕಾರ ಕನಿಷ್ಠ ವೇತನ ನಿಗದಿಪಡಿಸಿದೆಯೇ; ನಿಗಧಿಪಡಿಸಿದ್ದಲ್ಲಿ, ನಿಗದಿಪಡಿಸಿರುವ ವೇತನವೆಷ್ಟು; ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಈ ಕನಿಷ್ಟ ವೇತನ ಅನ್ವಯಿಸುವುದಿಲ್ಲವೇ? (ಮಾಹಿತಿ ಒದಗಿಸುವುದು) | 1. ಖಾಸಗಿ ವಲಯದಲ್ಲಿ ಕೆಲಸ ಮಾಡುವ ಆಯುಷ್ ವೈದ್ಯರಿಗೆ ಆಯುಷ್ ಇಲಾಖೆಯಿಂದ ಕನಿಷ್ಠ ವೇತನ ನಿಗಧಿಪಡಿಸುವುದಿಲ್ಲ.<br>2. KPSC ಹಾಗೂ ಇತರೆ ಆಯ್ಕೆ ಪ್ರಾಧಿಕಾರಗಳಿಂದ ಆಯ್ಕೆಗೊಂಡು ಆಯುಷ್ ಇಲಾಖೆಯಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಆರ್ಥಿಕ ಇಲಾಖೆಯು ನಿಗಧಿಪಡಿಸಿರುವಂತೆ ವೇತನ ನೀಡಲಾಗಿರುತ್ತದೆ.<br>3. ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರುಗಳಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರ್.ಓ.ಪಿ ಯಡಿ ಅನುಮೋದನೆಯಾಗಿರುವಂತೆ ವೇತನ ಪಾವತಿಸಲಾಗುತ್ತಿದೆ. |

**ಸಂಖ್ಯೆ: ಆಕುಕ 70 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು